ಶ್ರೀ ಬಿ. ಎ. ಉಮಂರಬ್ಬ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ೧೧ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂತು ಇನ್ನು ೭ ಕೊಳವೆ ಬಾವಿಗಳನ್ನು ಕೊರೆಯಲು ಯೋಜಿಸಲಾಗಿದೆ ಎಂದು ಹೇಳಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಬಂಟ್ವಾಳ ಪ್ರದೇಶ ಹೇಗಿದೆ ಎಂಬುದು ಮಾನ್ಯ ಸಚಿವರಿಗೂ ಸಹ ಗೊತ್ತಿದೆ. ಆದುದರಿಂದ ಆದಷ್ಟು ಬೇಗ ಈ ಕೆಲಸವನ್ನು ಮಾಡಿಸಬೇಕು. 'ಹಂಡೆಯೊಳಗೆ ತೊಂಡೆಕಾಯಿ' ಇರುವ ಹಾಗೆ ಮಾಡದೆ ಹಂಡೆಯೊಳಗೆ ಬದನೇ ಕಾಯಿ ಇರುವ ಹಾಗೆ ಮಾಡಬೇಕು. ಅಂದರೆ ಇನ್ನು ಅಲ್ಲಿ ೧೫ ಕೊಳವೆ ಬಾವಿಗಳನ್ನಾದರೂ ಹೆಚ್ಚಿಗೆ ಹಾಕಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಭೆಗೆ ನಾನು ಹಿಂದೆಯೇ ಹೇಳಿದ್ದೇನೆ. ಕೊಳವೆ ಬಾವಿಗಳನ್ನು ಎಷ್ಟು ಹಾಕಿಸಬೇಕು, ಯಾವಾಗ ಹಾಕಿಸಬೇಕು ಎನ್ನುವ ಅಧಿಕಾರವನ್ನು ಆಯಾ ಕ್ಷೇತ್ರದ ಸನ್ಮಾನ್ಯ ಸದಸ್ಯರುಗಳಿಗೆ ಬಿಟ್ಟು ಬಿಟ್ಟಿದೆ. ಜಿಲ್ಲಾ ಮಟ್ಟದಲ್ಲಿ ನಡೆಯತಕ್ಕ ಸಭೆಯಲ್ಲಿ ಮಾನ್ಯ ಸದಸ್ಯರು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಂಡು ಮಾನ್ಯ ಸದಸ್ಯರ ಇಚ್ಛೆ ಮೇರೆಗೆ ೧೫ ಅಲ್ಲ ೨೫ ಕೊಳವೆ ಬಾವಿಗಳನ್ನಾದರೂ ಹಾಕಿಸಿಕೊಳ್ಳಲಿ. ಹಾಕಿಸಿಕೊಡುವ ಜವಾಬ್ದಾರಿ ನನ್ನದು ಇರಲಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಬೋರ್‌ವೆಲ್‌ಗಳ ಅಗತ್ಯ ಎಷ್ಟು ಇದೆಯೋ ಅಷ್ಟನ್ನೂ ಹಾಕಿಸೋಣ.

ಶ್ರೀ ಯಂ, ಭೂಪತಿ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ಲಾರಿಫಿಕೇಷನ್ ಇದೆ.

ಅಧ್ಯಕ್ಷರು.—ಭೂಪತಿಯವರೇ ನೀವು ದಯವಿಟ್ಟು ಕುಳಿತುಕೊಳ್ಳಿ. ನೀವು ಈ ತರಹ ಕೇಳುತ್ತಾ ಇದ್ದರೆ ಪ್ರಶ್ನೋತ್ತರ ವೇಳೆ ಮುಗಿದುಹೋಗಿ ಪ್ರಶ್ನೆಗಳ ಲ್ಯಾಪ್ಸ್ ಆಗಿಬಿಡುತ್ತದೆ.

ಶ್ರೀ ಯಂ. ಭೂಪತಿ.—ಒಂದೇ ಒಂದು ನಿಮಿಷ, ಇಷ್ಟು ಹೊತ್ತಿಗೆ ನಾನು ಕೇಳಿ ಮುಗಿಸಿ ಬಿಡುತ್ತಿದ್ದೆ.

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ಯಂ. ಭೂಪತಿ.—ಜಿಲ್ಲಾ ಮಟ್ಟದಲ್ಲಿ ನಡೆಯುವ ಶಾಸಕರ ಸಮಿತಿಯಲ್ಲಿ, ನಮ್ಮ ಕ್ಷೇತ್ರಕ್ಕೆ ೨೦ ಬೋರ್‌ವೆಲ್‌ಗಳು ಬೇಕೆಂದು ನಾನು ಕೇಳಿದ್ದೆ. ಆದರೆ ಮಂಜೂರು ಮಾಡಿದ್ದು ಕೇವಲ ೨ ಬೋರ್‌ವೆಲ್‌ಗಳನ್ನು ಮಾತ್ರ. ಆದ್ದರಿಂದ ಇಂತಹ ವಿಷಯಂಗಳನ್ನು ಮಾನ್ಯ ಮಂತ್ರಿಯವರು ಗಮನದಲ್ಲಿ ಇಟ್ಟುಕೊಳ್ಳಲಿ ಎಂದೂ ನಾನು ಈ ವಿಷಯವನ್ನು ಹೇಳಿದ್ದೇನೆ.

ಕೆ.ಜಿ.ಎಫ್. ಸ್ಯಾನಿಟರಿ ಬೋರ್ಡಿನ ಬಗ್ಗೆ.

೨೮೯. ಶ್ರೀ ಟಿ.ಎಸ್. ಮಣಿ (ಕೆ.ಜಿ.ಎಫ್.).—ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆ.ಜಿ.ಎಫ್.ನ ಗಣಿ ಕಾರ್ಮಿಕರ ಕಾಲೋನಿಯಲ್ಲಿ ಒಂದು ಸ್ಯಾನಿಟರಿ ಬೋರ್ಡ್ ಇರುವುದು ಸರ್ಕಾರಕ್ಕೆ ತಿಳಿದಿದೆಯೇ

ಆ) ಸ್ಯಾನಿಟರಿ ಕಾರ್ಯಗಳ ನಿರ್ವಹಣೆಯನ್ನು ಸರ್ಕಾರಕ್ಕೆ ವಹಿಸುವ ಬಗ್ಗೆ ಬಿ.ಜೆ.ಎಂ.ಎಲ್. ಇವರಿಂದ ಸರ್ಕಾರಕ್ಕೆ ಏನಾದರೂ ಪ್ರಸ್ತಾವನೆಗಳು ಬಂದಿವೆಯೇ

ಇ) ಪ್ರಸ್ತಾವನೆಯ ಬಗ್ಗೆ ಸರ್ಕಾರವು ಏನು ಮಾಡಲು ಉದ್ದೇಶಿಸಿದೆ.

ಈ) ಕಾರ್ಮಿಕರ ಕಾಲೋನಿಯನ್ನು ನಿರ್ವಹಿಸುವ ತಮ್ಮ ಜವಾಬ್ದಾರಿಗಳ ಬಗ್ಗೆ ಹಿಂಜರಿಯುತ್ತಿರುವ ಇಂತಹ ಕಾರ್ಖಾನೆಗಳ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಎ. ಲಕ್ಷ್ಮಿಸಾಗರ್.—ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.

ಅ) ತಿಳಿದಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

SRI T. S. MANI.—Sir, the roads in K.G.F., are in very bad condition and there is no proper water facility available in the Town I request the Government to see that the K.G.F Sanitary Board works effectively so that the roads and water facilities in K.G.F. town are improved

SRI A. LAKSHMI SAGAR.—Sir, it is the responsibility of the local authorities within whose jurisdiction the local authorities situate. However, on the representation of the Hon'ble Member, I will certainly ask the local authorities to attend to these civic amenities.

SRI T. S. MANI.—Sir, it is the responsibility of the Goverment also. I request the Hon'ble Minister to kindly look into this matter.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರಕ್ಕೆ ನೇರವಾದ ಜವಾಬ್ದಾರಿ ಇಲ್ಲ. ಹಣಕಾಸಿನ ಸಹಾಯ ಬೇಕಾದರೂ ಬೇಕಾದಲ್ಲಿ, ಡೆವಲಪ್‌ಮೆಂಟ್ ಗ್ರಾಂಟ್ ಮೂಲಕ ಕೊಡುವುದಕ್ಕೆ ವ್ಯವಸ್ಥೆ ಇದೆ. ಅಲ್ಲಿ ಈಗ ಆ ಸಂಸ್ಥೆಗಳಿಗೆ ತಾವು ವಿಷಯಗಳನ್ನು ಒಟ್ಟಾಗಿ ಸೇರಿಸಿ ಒಂದು ಮಾಡಬೇಕೆಂದಿದ್ದೇವೆ. ಅವರೆ, ಅಲ್ಲಿ ಆದಕ್ಕೆ ಒಮ್ಮತ ಬರಲಿಲ್ಲ. ಅಲ್ಲಿನ ಆ ಅಥಾರಿಟಿಗಳನ್ನು ಒಟ್ಟಾಗಿ ಮಾಡಲು ಆ ಸಂಸ್ಥೆಗಳ ಒಮ್ಮತ ಪಡೆಯಲು ಪ್ರಯತ್ನ ನಡೆದಿದೆ.

ಅಧ್ಯಕ್ಷರು.—ಶ್ರೀ ಎಸ್.ಕೆ. ಕಾಂತಾ ಅವರ ಪ್ರಶ್ನೆ ಸಂಖ್ಯೆ ೩೬(೨೬೩)ನ್ನು ಮುಂದೂಡಲಾಗಿದೆ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಸ್ಥಾಯಿದಳ ಮತ್ತು ನೇಮಕಾತಿ ನಿಯಮಗಳಿಗೆ ಕೆಲವು ಹುದ್ದೆಗಳನ್ನು ಸೇರಿಸುವ ಬಗ್ಗೆ.

೩೦೭. ಶ್ರೀ ಸಿ.ಎನ್. ಭಾಸ್ಕರಪ್ಪ (ಬಳ್ಳಾರಿ).—ಮಾನ್ಯ ಭಾರಿ ಮಂತ್ರಿ ಮಹೋದಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಯಾವುದೇ ನಿರ್ದಿಷ್ಟ ಅಧಿಕಾರದ ಶ್ರೇಣಿಯಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸೇರಿಸಲಾಗಿದೆಯೇ ?

೧ ಸಣ್ಣ ಪ್ರಮಾಣದ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿನ ಫೋರ್‌ಮನ್ ಮತ್ತು ಶಿಕ್ಷಕರು (ಡಿಪ್ಲೊಮೋ)

೨ ಜಿಲ್ಲಾ ನೇಯ್ಗೆ ಮೆಲ್ವಿಚಾರಕರು(ಪರಿವೀಕ್ಷಕರು)

೩ ಕೈಗಾರಿಕಾ ಅಭಿವೃದ್ಧಿ ಅಧಿಕಾರಿಗಳು

೪ ಜೇನು ಸಾಕಣಿಕೆ ನಿರ್ದೇಶಕ ಉಪಾಧ್ಯಾಯ

ಆ) ಹಾಗಿಲ್ಲದಿದ್ದಲ್ಲಿ, ಸದರಿ ಹುದ್ದೆಗಳನ್ನು ಸೇರಿಸಲಾಗುವುದೆ.